ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಸಂಖ್ಯೆ

೬೨೬ ಶ್ರೀ ಬಿ. ಗುರುಪ್ರಸಾದ್ (ನೆಲಮಂಗಲ).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಒಟ್ಟು ಸಂಖ್ಯೆ ಎಷ್ಟು ?

ಆ) ಆ ಪೈಕಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಸಂಖ್ಯೆ ಎಷ್ಟು ?

ಇ) ಆ ಪೈಕಿ ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ಸರ್ಕಾರ ಸೇವಾ ನಿಯಮಗಳ ಪ್ರಕಾರ ನಿಯಮಿತವಾಗಿ ನಿವೃತ್ತಿಗೊಳಿಸಲಾಗಿರುವವರ ಸಂಖ್ಯೆ ಎಷ್ಟು ? (ಹೆಸರು ವಿಳಾಸ ಹಾಗೂ ನಿವೃತ್ತಿಗೊಳಿಸಿದ ದಿನಾಂಕವನ್ನೊಳಗೊಂಡಂತೆ ವಿವರಗಳನ್ನು ನೀಡಿವುದು)

ಈ) ಕಡ್ಡಾಯ ನಿವೃತ್ತಿ ಮಾಡಿರುವವರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದವರ ಸಂಖ್ಯೆ ಎಷ್ಟು ? (ಹೆಸರು ದಿನಾಂಕ ಮತ್ತು ವಿಳಾಸವನ್ನು ನೀಡುವುದು)

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ವಕ್ಫ್ ಮಂತ್ರಿಗಳು).—

ಅ) ೧೭೫

ಆ) ಪರಿಶಿಷ್ಟ ಜಾತಿ ... ೨೦

ಪರಿಶಿಷ್ಟ ಪಂಗಡ ... ೨

(ದಿನಾಂಕ ೧-೨-೧೯೮೮ ರಂದು)

ಇ) ಒಂದೂ (ಗ್ರಾಮೀಣಾ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಬಂಬಂಧಿಸಿದಂತೆ

ಶ್ರೀ ರಘುನಾಥ ಮಾನ್ವಿ, ಸಹಾಯಕ ಯೋಜನಾಧಿಕಾರಿ (ಗ್ರಾಮೀಣ ಇಂಧನ) ಚಿಕ್ಕೋಡಿ. ನಿವೃತ್ತಿಯ ದಿನಾಂಕ ೧೭-೮-೧೯೮೭.

ಈ) ಇಲ್ಲ.

ದಾವಣಗೆರೆಯಲ್ಲಿ ವಸತಿ ನಿರ್ಮಾಣದ ಬಗ್ಗೆ

೭೧೬ ಶ್ರೀ ಪಂಪಾಪತಿ (ದಾವಣಗೆರೆ).— ಮಾನ್ಯ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಾವಣಗೆರೆ ನಗರವು ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿರುವುದರಿಂದ ವಸತಿ ಸಮಸ್ಯೆ ಇರುವುದು ಸರ್ಕಾರದಪರ ಗಮನಕ್ಕೆ ಬಂದಿದೆಯೇ ?

ಆ) ದಾವಣಗೆರೆ ನಗರದಲ್ಲಿ ನಿರ್ಮಿಸಲಾಗುತ್ತಿರುವ ಮನೆಗಳೆಷ್ಟು ? ಹಾಗೂ ತಮ್ಮ ಇಲಾಖೆ ವತಿಯಿಂದ ಎಷ್ಟು ಮನೆಗಳನ್ನು ನಿರ್ಮಿಸುತ್ತಿದ್ದೀರಿ, ಇನ್ನೂ ಎಷ್ಟು ಮನೆಗಳನ್ನು ನಿರ್ಮಿಸುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ ?

ಶ್ರೀ ಮೊಹಮ್ಮದ್ ಮೊಯಿನುದ್ದೀನ್ (ವಸತಿ ರಾಜ್ಯ ಸಚಿವರು).—

ಅ) ಹೌದು.

ಆ) ಸರ್ಕಾರವು ಕರ್ನಾಟಕ ಗೃಹ ಮಂಡಳಿಯಂ ವತಿಯಿಂದ ದಾವಣಗೆರೆ ನಗರದಲ್ಲಿ ೫೬೯ ಮನೆಗಳನ್ನು ನಿರ್ಮಿಸಿದೆ. ಸದ್ಯದಲ್ಲಿ ಯಾವ ಮನೆಗಳನ್ನು ನಿರ್ಮಿಸುವ ಯೋಜನೆಯನ್ನು ಹಾಕಿಕೊಂಡಿಲ್ಲ. ಏಕೆಂದರೆ ಸಾಕಷ್ಟು ಪ್ರಮಾಣದಲ್ಲಿ ಯೋಗ್ಯವಾದ ಜಮೀನು ಲಭ್ಯವಾಗಿಲ್ಲ.